## ಚಿತ್ತೋರಿನಿಂದ ನಿರ್ಗಮನ

ಮೀರಾ ಚಿತ್ತೋರನ್ನು ಬಿಟ್ಟು ನಡೆದಳು. ಆಗ ಅಲ್ಲಿನ ಭಾಗ್ಯ ದೇವತೆಯೇ ಹೋದಂತಾಯಿತು. ಏಕೆಂದರೆ ಅವಳ ನಿರ್ಗಮನದ ನಂತರ, ಶತ್ರುಗಳು ಮತ್ತೆ ಮತ್ತೆ ಚಿತ್ತೋರನ್ನು ಮುತ್ತಿದರು. ದಾರುಣ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿ, ಚಿತ್ತೋರು ಅವಶೇಷಗಳ ನಗರ ವಾಯಿತು.

ಸ್ವಲ್ಪಕಾಲ ಮೀರಾ ಮೆರ್ತಾ ಎಂಬ ನಗರದಲ್ಲಿದ್ದ ತನ್ನ ಸೋದರ ಮಾವನ ಮನೆಯಲ್ಲಿ ವಾಸವಾಗಿದ್ದಳು. ಆದರೆ ಅಲ್ಲಿಯೂ ರಾಜ ಕೀಯ ಕ್ಷೋಭೆ ಉಂಟಾಯಿತು. ಹೀಗಾಗಿ ಅವಳು ರಾಜಸ್ಥಾನ ಪ್ರದೇಶವನ್ನೇ ತ್ಯಜಿಸಬೇಕಾಯಿತು. ಮೀರಾ ಈಗ ಅಕ್ಷರಶಃ ಭಿಕ್ಷುಕಿ ಯಾಗಿಬಿಟ್ಟಳು. ರಾಜಮನೆತನದ ಕಣ್ಮಣಿಯಾಗಿದ್ದ ಅವಳು ಧೂಳು ಮುಸುಕಿದ ರಸ್ತೆಗಳಲ್ಲಿ ನಡೆಯುತ್ತ ಹೋದಳು. ಬಳಿಕ ಆಕೆ ಹಲ ವಾರು ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದಳು. ಇಷ್ಟಾದರೂ ಭಗ ವಂತನ ಮೇಲಿನ ನಿರ್ಭರತೆ ಅವಳಲ್ಲಿ ನೂರಾರು ಪಾಲು ಹೆಚ್ಚು ತ್ತಲೇ ಹೋಯಿತು. ತನ್ನ ಸೂರೆಗೊಳ್ಳುವ ಕಂಠದಲ್ಲಿ ವೈರಾಗ್ಯದ ಹಾಡನ್ನು ಅವಳು ಹಾಡುತ್ತ ಹೋದಳು:

''ಓ ಗಿರಿಧರಲಾಲ, ನನಗೆ ತಂದೆ, ತಾಯಿ, ಸಹೋದರ, ಸ್ನೇಹಿತ – ಯಾರೂ ಇಲ್ಲ. ನಿನ್ನ ಸಲುವಾಗಿ ನಾನು ಎಲ್ಲ ರೀತಿಯ ಸಂತೋಷವನ್ನೂ ತ್ಯಜಿಸಿಬಿಟ್ಟಿದ್ದೇನೆ. ದಯವಿಟ್ಟು ನನ್ನ ಕೈಬಿಡ ಬೇಡ. ದಯವಿಟ್ಟು ನನ್ನನ್ನು ಕೈಬಿಡಬೇಡ.''

## ವೃಂದಾವನದಲ್ಲಿ

ಹೀಗೆಯೇ ಪಯಣಿಸುತ್ತ ಮೀರಾ ವೃಂದಾವನ ಧಾಮಕ್ಕೆ ಬಂದಳು. ಅವಳ ಅಸಾಧಾರಣ ಕೃಷ್ಣಪ್ರೇಮ ಮತ್ತು ದೈವೋನ್ಮಾದ ಗಳನ್ನು ಕಂಡು ಜನರು ಮಾರುಹೋದರು. ಅವಳ ಹೋದಲ್ಲೆಲ್ಲ ಹಬ್ಬದ ವಾತಾವರಣ ಉಂಟಾಗುತ್ತಿತ್ತು. ಆ ಕಾಲದಲ್ಲಿ ಶ್ರೀಚೈತನ್ಯ ಮಹಾಪ್ರಭುವಿನ ಪ್ರಮುಖ ಶಿಷ್ಯರಲ್ಲಿ ಒಬ್ಬರಾಗಿದ್ದ ಜೀವ ಗೋಸ್ವಾಮಿ ಅಲ್ಲಿಯೇ ವಾಸಿಸುತ್ತಿದ್ದರು. ಅವರು ಕಟ್ಟುನಿಟ್ಟಿನ ಸಾಧಕರಾಗಿದ್ದು, ಮಹಿಳೆಯರನ್ನು ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ಮೀರಾ ಅವರ ಸಂದರ್ಶನ ಬಯಸಿದಳು. ಆದರೆ ಗೋಸ್ವಾಮಿಗಳು ನಿರಾಕರಿಸಿದರು. ಮೀರಾ ಒಂದು ಪತ್ರವನ್ನು ಅವರಿಗೆ ಕಳಿಸಿದಳು. ಅದರಲ್ಲಿ ಹೀಗೆ ಬರೆದಿತ್ತು: ''ಪೂಜ್ಯರಾದ ಗೋಸ್ವಾಮಿಗಳು ಇನ್ನೂ ಲಿಂಗಭೇದವನ್ನು ಮೀರಿ ಪ್ರಗತಿಹೊಂದಿಲ್ಲವೆಂದು ತಿಳಿದು ಆಶ್ಚರ್ಯವಾಗುತ್ತಿದೆ. ಇದಲ್ಲದೆ, ಈ ಪವಿತ್ರ ವೃಂದಾವನದಲ್ಲಿ ಕೃಷ್ಣನೊಬ್ಬನೇ ಪುರುಷ, ಉಳಿದೆಲ್ಲವರೆಲ್ಲರೂ ಪ್ರಕೃತಿರೂಪರು. ಪೂಜ್ಯರು ತಮ್ಮನ್ನು ಪುರುಷರೂಪದವರೆಂದು ಭಾವಿಸಿದರೆ, ತಮ್ಮನ್ನು ಗೋಪಿ ಎಂದು ಇನ್ನೂ ಪರಿಗಣಿಸದಿದ್ದರೆ, ಅವರು ಈ ಕೃಷ್ಣಲೀಲಾಸ್ಥಾನವನ್ನು ಬಿಟ್ಟುಹೋಗುವುದು ಒಳ್ಳೆಯದು.'' ಈ ಪತ್ರವನ್ನು ಓದಿದ ಜೀವ ಗೋಸ್ವಾಮಿಗಳಿಗೆ ತಮ್ಮ ತಪ್ಪಿನ ಅರಿವಾ ಯಿತು. ಮೀರಾ ಸಾಧಾರಣ ಸಾಧಕಿಯಲ್ಲವೆಂದು ಮನವರಿಕೆ ಯಾಯಿತು. ಆಕೆ ಕೃಷ್ಣಾನುಭೂತಿ ಮತ್ತು ಕೃಷ್ಣಭಾವದಿಂದ ಕೂಡಿದ ಸಿದ್ಧ ಮಹಿಳೆ ಎಂಬುದರ ಜ್ಞಾನೋದಯವಾಯಿತು. ಸಮಯ ವ್ಯರ್ಥ ಮಾಡದೆ, ಅವರು ಮೀರಾಳನ್ನು ಭೇಟಿಮಾಡಿ, ನಮಸ್ಕಾರ ಗಳನ್ನು ಸಲ್ಲಿಸಿದರು. ಮೀರಾ ಕೂಡ ಗೋಸ್ವಾಮಿಗಳ ದರ್ಶನಭಾಗ್ಯ ವನ್ನು ಪಡೆದುಕೊಂಡಳು.

ಮೀರಾ ನಿಶ್ಚಿಂತೆಯಿಂದ ವೃಂದಾವನದಲ್ಲಿ ವಿಹರಿಸಲಾರಂಭಿಸಿ ದಳು. ವೃಂದಾವನದ ತನ್ನ ವಾಸ್ತವ್ಯದ ಅನುಭವವನ್ನು ಅವಳು ತನ್ನ ಒಂದು ಹಾಡಿನಲ್ಲಿ ಹೇಳಿಕೊಂಡಿದ್ದಾಳೆ. ವೃಂದಾವನದಿಂದ ಮೀರಾ ಮಥುರಾ ನಗರಕ್ಕೆ ಹೋದಳು. ಸುತ್ತಮುತ್ತಲ ತೀರ್ಥಕ್ಷೇತ್ರ ಗಳನ್ನು ಸಂದರ್ಶಿಸಿದ ನಂತರ, ಕೃಷ್ಣನ ಇನ್ನೊಂದು ಪ್ರಮುಖ ಲೀಲಾಕ್ಷೇತ್ರವಾದ ದ್ವಾರಕೆಗೆ ಬಂದಳು. ಗುಜರಾತಿ ಭಾಷೆಯನ್ನು ಕಲಿತು, ಅದರಲ್ಲೂ ಅನೇಕ ಹಾಡುಗಳನ್ನು ರಚಿಸಿದಳು. ಸ್ಥಳೀಯ ಭಕ್ತರು ಅವಳನ್ನು ಕೊಂಡಾಡಿದರು.

## ಗಿರಿಧರ ಲಾಲನ ಸನ್ನಿಧಿಗೆ

ಇತ್ತ ಚಿತ್ತೋರು ಅಧೋಗತಿಗೆ ಇಳಿದಿತ್ತು. ಮುಸ್ಲಿಮರ ಆಕ್ರಮಣದಿಂದ ಬಲಹೀನವಾಗಿತ್ತು. ಹೊಸರಾಜನಾದ ಉದಯ ಸಿಂಗ್ ದೈವಭೀರುವಾಗಿದ್ದನು. ಮೇವಾರ ರಾಜ್ಯದ ಈ ದುರ್ದಶೆಗೆ ಮೀರಾಳನ್ನು ಉಚ್ಚಾಟಿಸಿದ್ದೇ ಕಾರಣವೆಂದು ಮನಗಂಡನು. ಅವಳನ್ನು ದ್ವಾರಕೆಯಿಂದ ಕರೆತರುವಂತೆ ರಾಜಪುರೋಹಿತನನ್ನೇ ಕಳಿಸಿಕೊಟ್ಟನು. ಅವನೊಂದಿಗೆ ನಂಬಿಕಸ್ಥ ಜನರೂ ಇದ್ದರು. ಅವರೆ ಲ್ಲರೂ ಮೀರಾಳನ್ನು ಚಿತ್ತೋರಿಗೆ ಹಿಂತಿರುಗುವಂತೆ ಬಹಳಷ್ಟು ಕೇಳಿಕೊಂಡರು. ಆದರೆ ಮೀರಾ ಇದಕ್ಕೆ ಒಪ್ಪಲಿಲ್ಲ. ಕಡೆಗೆ ರಾಜ ದೂತನಾಗಿ ಬಂದಿದ್ದ ಆ ರಾಜಪುರೋಹಿತನು ಒಂದು ಕಠಿಣ ನಿರ್ಧಾರಕ್ಕೆ ಬಂದನು. ಮೀರಾ ಬರಲು ಒಪ್ಪುವವರೆಗೂ ಉಪವಾಸ ವ್ರತ ಮಾಡುವುದಾಗಿ ಬೆದರಿಸಿದನು. ಪುರೋಹಿತನ ಈ ಸತ್ಯಾಗ್ರಹ ದಿಂದ ಮೀರಾಳ ಮನಸ್ಸು ಪ್ರಕ್ಷುಬ್ಧವಾಯಿತು. ತನಗಾಗಿ ಒಬ್ಬ ವ್ಯಕ್ತಿ ಸಾಯುವುದು ಅವಳಿಗೆ ಬೇಕಾಗಿರಲಿಲ್ಲ.


ಅಸಹಾಯಕಳಾಗಿ ಮೀರಾ ದೇಗುಲವನ್ನು ಪ್ರವೇಶಿಸಿದಳು. ಭಗವಂತನ ಸಹಾಯಕ್ಕಾಗಿ ಅಂಗಲಾಚಿದಳು. ಹಾಡುಗಳ ಮೇಲೆ ಹಾಡುಗಳು ಅವಳ ಮಧುರಕಂಠದಿಂದ ಹೊರಹೊಮ್ಮಿದವು. ಪುರೋಹಿತನು ಹೊರಗಡೆ ಕಾಯುತ್ತಲೇ ಇದ್ದನು. ತಮ್ಮ ಊರಿನ ಭಾಗ್ಯದೇವತೆ ಮತ್ತೆ ಹಿಂತಿರುಗುತ್ತಾಳೆಂಬ ಆಕಾಂಕ್ಷೆ ಅವನಲ್ಲಿತ್ತು. ಮುಚ್ಚಿದ್ದ ಬಾಗಿಲು ಕಡೆಗೂ ಒಳಗಡೆಯಿಂದ ತಾನೇತಾನಾಗಿ ತೆರೆದುಕೊಂಡಿತು. ಆದರೆ ಮೀರಾ ಮಾಯವಾಗಿದ್ದಳು. ಕೃಷ್ಣನು ಚಿತ್ತೋರಿಗೆ ಹೋಗಲು ಅವಳಿಗೆ ಅನುಮತಿ ಕೊಡಲಿಲ್ಲ. ಬದಲಾಗಿ ತನ್ನಲ್ಲಿಯೇ ಅಡಗಿಸಿಕೊಂಡಿದ್ದನು. ಅವಳು ಎಲ್ಲಿಗೆ ತಾನೇ ಹೋಗಲು ಸಾಧ್ಯ? ದೇಗುಲದ ಬಾಗಿಲು ಮುಚ್ಚಿತ್ತು. ಪುರೋ ಹಿತನು ಬಾಗಿಲ ಹತ್ತಿರವೇ ಕಾಯುತ್ತ ಕುಳಿತಿದ್ದನು. ಜನರೆಲ್ಲ ಎಷ್ಟೋ ಹುಡುಕಿದರು. ಮೀರಾ ಕಾಣಲೇ ಇಲ್ಲ. ಆದರೆ ಸಣ್ಣ ದನಿಯಲ್ಲಿ ಅವಳ ಕಟ್ಟಕಡೆಯ ಆಕ್ರಂದನ ಕೇಳಿಬಂತು:


''ಓ ಗಿರಿಧರಲಾಲ, ಓ ನನ್ನ ಪ್ರಭು. ಮೀರಾಳನ್ನು ಮರೆಯ ದಿರು, ಅವಳು ಎಂದೆಂದಿಗೂ ನಿನ್ನೊಡನೆಯೇ ಇರಲಿ..''



# ಸೋದರಿ ನಿವೇದಿತಾ ಭಾಗ ೧

ಕಥೆ: ದೇವಪ್ರಸಾದ ಭಟ್ಟಾಚಾರ್ಯ  ಅನುವಾದ: ಉಷಾ ಎಸ್. ಮೂರ್ತಿ  ಚಿತ್ರ: ಸುನಿತಾ ವಾಸು




1867ರ ಅಕ್ಟೋಬರ್ 28ರಂದು ನೋಬಲ್ ದಂಪತಿಗಳಿಗೆ ಒಂದು ಹೆಣ್ಣುಮಗು ಹುಟ್ಟಿತು.
ಆ ಮಗುವಿಗೆ ಮಾರ್ಗರೆಟ್ ಎಲಿಜಬೆತ್ ಎಂದು ನಾಮಕರಣ ಮಾಡಿದರು.
ಆ ಮಗುವಿಗೆ ದೇಶಕ್ಕಾಗಿ ಹೋರಾಡಿದ ಐರಿಷ್ ದೇಶಭಕ್ತರ ಕಥೆಗಳನ್ನು ಹೇಳುತ್ತಿದ್ದರು.
ಮಾರ್ಗರೆಟ್ ಚಿಕ್ಕವಳಿದ್ದಾಗಲೇ ಅವರ ತಂದೆ ತಮ್ಮ ಕುಟುಂಬವನ್ನು ಇಂಗ್ಲೆಂಡಿಗೆ ವರ್ಗಾಯಿಸಿದರು.
ಮಾರ್ಗರೆಟ್‌ಳಿಗೆ ತನ್ನ ತಂದೆಯ ಮೇಲೆಯೇ ಹೆಚ್ಚಿನ ಪ್ರೀತಿ.
ತಾವು ಬಡವರಿಗಾಗಿ ನಡೆಸುತ್ತಿದ್ದ ಸೇವಾಕಾರ್ಯಗಳಲ್ಲಿ ಸಾಮ್ಯುಯೆಲ್ ತಮ್ಮ ಮಗಳನ್ನೂ ಪಾಲ್ಗೊಳ್ಳುವಂತೆ ಮಾಡುತ್ತಿದ್ದರು.


ಮಾರ್ಗರೆಟ್ ದಿಟ್ಟ ಐರಿಷ್ ಸ್ವಭಾವವನ್ನು ತನ್ನ ಹೆತ್ತವರಿಂದಲೇ ಪಡೆದಿದ್ದಳು.
ತಂದೆಯ ಸ್ವತಂತ್ರ ಮನೋಭಾವ ಹಾಗೂ ಸತ್ಯಸಂಧತೆ, ತನ್ನ ಮನೆತನದಿಂದಲೇ ಅವಳಿಗೂ ಬಂದಿತ್ತು.
ಸೈಕಲ್ ಸವಾರಿ ಮಾಡುವುದೆಂದರೆ ಮಾರ್ಗರೆಟ್‌ಳಿಗೆ ಎಲ್ಲಿಲ್ಲದ ಉತ್ಸಾಹ. ಆದರೆ ಅದನ್ನು ಸರಿಯಾಗಿ ಚಾಲನೆ ಮಾಡಲು ಅವಳಿಗೆ ಬರುತ್ತಿರಲಿಲ್ಲ.
ಒಂದು ದಿನ ಸೈಕಲ್ ಸವಾರಿ ಮಾಡುತ್ತಿರುವಾಗ, ರಸ್ತೆ ಪಕ್ಕದಲ್ಲಿ ಒಬ್ಬ ಪಾತ್ರೆ ರಿಪೇರಿ ಮಾಡುವವನನ್ನು ನೋಡಿದಳು.
ಆದರೆ ತನ್ನ ಸೈಕಲ್ಲನ್ನು ನಿಲ್ಲಿಸಲು ಅವಳಿಗೆ ಆಗಲಿಲ್ಲ. ದಾರಿಬಿಡು ಎಂದು ಅವನಿಗೆ ಕಿರುಚಿಕೊಂಡಳು.
ಹೇ!
ನನಗೆ ದಾರಿ ಬಿಡು!
ರಸ್ತೆಯಲ್ಲಿ ಬೇಕಾದಷ್ಟು ಸ್ಥಳವಿದ್ದರೂ, ಅವಳು ಅವನಿಗೆ ಢಿಕ್ಕಿ ಹೊಡೆದಳು.